Sri M. MALLIKARJUNASWAMY.—The difference is only one increment.

Sri S. A. PATIL.—How many years is it since such disparity is going on in the State ?

Sri M. MALLIKARJUNASWAMY.—Since 1969.

Sri S. A. PATIL.—What exact time does Government require to rectify this anomaly ?

Sri M. MALLIKARJUNASWAMY.—Very early the anomaly will be rectified and the B. D. Os will get the benefit.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—ಡೆಪ್ಯುಟಿ ಬ್ಲಾಕ್ ಡೆವಲಪ್‌ಮೆಂಟ ಆಫೀಸರ ಸ್ಕೇಲ ಏನು? ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ ಸ್ಕೇಲ ಏನು? ಡೆಪ್ಯುಟಿ ಬ್ಲಾಕ್ ಡೆವಲಪ್‌ಮೆಂಟ ಆಫೀಸರನ್ನು, ಬ್ಲಾಕ್ ಡೆವಲಪ್‌ಮೆಂಟ ಆಫೀಸರಾಗಿ ಪ್ರಮೋಷನ್ ಮಾಡುವಾಗ, ಹೆಚ್ಚು ವೇತನ ಬಾರದೆ ಇರಲು ಕಾರಣವೇನು? ಈ ತಾರತಮ್ಯ ಇರುವುದರಿಂದ, ಇದು ಪ್ರಮೋಷನ್ಸ್ ಆನ್ನಿಸಿಕೊಳ್ಳುತ್ತದೆಯೇ ? ಇದನ್ನು ಸರಿಪಡಿಸತಕ್ಕ ಮಾರ್ಗ ಸರ್ಕಾರ ಮಾಡುತ್ತದೆಯೇ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗಾಗಲೇ ಉತ್ತರ ಕೊಟ್ಟಿದ್ದೇನೆ. ೨೫೦—೫೦೦ ಇಬ್ಬರಿಗೂ ಸ್ಕೇಲು ಒಂದೇ.

ಡೆಪ್ಯುಟಿ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರು ೩೫೦ ರೂಪಾಯಿ ರೀಚ್ ಆದಾಗ ಎಫಿಶಿಯನ್ಸಿ ಬಾರ್ ಕ್ರಾಸ್ ಮಾಡಬೇಕು. ಇದಕ್ಕೆ ಈಗಾಗಲೇ ಉತ್ತರ ಹೇಳಿದ್ದೇನೆ. ಅವರೆಲ್ಲರಿಗೂ ಬೆನಿಫಿಟ್ ಸಿಗುತ್ತದೆ. ಒಂದೇ ಇನ್‌ಕ್ರಿಮೆಂಟ್ ವ್ಯತ್ಯಾಸ ಅಷ್ಟೆ.

GOVERNMENT SERVANTS PARTICIPATION IN R. S. S. ACTIVITIES

946. Sri J. P. SARWESH (Sedam).—Will the Chief Minister be pleased to state:—

(a) whether Government is aware that many Government setvants are actively participating in the activities of R. S. S. and even are members of R. S. S. Party;

(b) whether Government keeps a watch on such officers who are closely participating in the activities of R. S. S. ?

Sri H. M. CHANNABASAPPA (Minister for Public Works and Electricity) [on behalf of Sri D. DEVARAJ URS Chief Minister] .—

(a) No instances of Government servants participating in R. S. S. activities have come to notice of Government.

(b) Does not arise in view of reply to clause (a).

Sri J. P. SARWESH.—Supplementary to (a): Will Government take suitable action against such officials who are participating in such activities if such instances are brought to the notice of the Government ?

†Sri H. M. CHANNABASAPPA.—It goes without saying. If such instances are brought to the notice of the Government. Government will certainly make necessary enquiries and if they are proved, drastic action will be taken against the officials concerned.

ಶ್ರೀ ಕೆ. ಎಂ. ನಾಗಣ್ಣ — ಸರ್ಕಾರ ಆರ್. ಎಸ್. ಎಸ್. ನ್ನು ಬ್ಯಾನ್ ಮಾಡಿದೆಯೇ ? ಒಂದು ವೇಳೆ ಬ್ಯಾನ್ ಮಾಡದೇ ಹೋದರೆ ಸರ್ಕಾರದ ಅಧಿಕಾರಿಗಳಾಗಲೀ ನೌಕರರಾಗಲೀ, ಅದರಲ್ಲಿ ಸದಸ್ಯರಾಗುವುದಕ್ಕೆ ಅರ್ಹತೆ ಇಲ್ಲವೇ ಅಥವಾ ಹಕ್ಕಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನ್ಯಾಷನಲ್ ಪಾಲಿಸಿ ಏನಿದೆ, ಅದಕ್ಕೆ ವಿರುದ್ಧವಾಗಿ ನಡೆಯತಕ್ಕ ಸಂಸ್ಥೆಗಳಲ್ಲಿ ಸರ್ಕಾರಿ ನೌಕರರು ಭಾಗವಹಿಸಲಿಕ್ಕೆ ಅಥವಾ ಮೆಂಬರ ಆಗಲಿಕ್ಕೆ ಅವಕಾಶವಿಲ್ಲ. ಇದು ಜನಜನಿತವಾದ ವಿಷಯ.

ಶ್ರೀ ಕಾಗೋಡು ತಿಮ್ಮಪ್ಪ — ಆರ್. ಎಸ್. ಎಸ್. ಪಕ್ಷವನ್ನು ರಾಜಕೀಯ ಪಕ್ಷವೆಂದು ಸರ್ಕಾರದವರು ಪರಿಗಣನೆ ಮಾಡಿದ್ದಾರೆಯೇ ? ಹಾಗಿದ್ದ ಪಕ್ಷದಲ್ಲಿ ಸರ್ಕಾರಿ ಅಧಿಕಾರಿಗಳು ಸೇರತಕ್ಕದ್ದು ನಿಷೇಧಿಸಿ ಆಜ್ಞೆಯನ್ನು ಸರ್ಕಾರದವರು ಹೊರಡಿಸಿದ್ದಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಒಂದು ಮತಾಭಿಮಾನವನ್ನು ಉಜ್ವಲಗೊಳಿಸತಕ್ಕ ಚಟುವಟಿಕೆ ಇರೋಣದರಿಂದ ಇದು ನಾನ್ ಸೆಕ್ಯುಲರ್ ಇನ್‌ಸ್ಟಿಟ್ಯೂಷನ್ ಎಂದು ಸರ್ಕಾರದ ಅಭಿಪ್ರಾಯವಿದೆ. ಅದಕ್ಕೋಸ್ಕರವಾಗಿ ಅಧಿಕಾರಿಗಳು ಇದರಲ್ಲಿ ಭಾಗವಹಿಸತಕ್ಕಂಥ ಏರ್ಪಾಡು ಮಾಡಲಿಕ್ಕೂ ಸಾಧ್ಯವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.— ಆರ್. ಎಸ್. ಎಸ್. ಸಂಸ್ಥೆ ಒಂದು ರಾಜಕೀಯ ಪಕ್ಷ ಎಂದು ಸರ್ಕಾರದವರು ತೀರ್ಮಾನ ಮಾಡಿದ್ದಾರೆಯೇ ಹೇಗೆ? ಅದರ ಆಧಾರದ ಮೇಲೆ ಇದಕ್ಕೆ ಸರ್ಕಾರಿ ನೌಕರರ ಪ್ರವೇಶವನ್ನು ನಿಷೇಧ ಮಾಡ ಲಾಗಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ಪಷ್ಟವಾಗಿ ಹೇಳಿದೆ. ಸೆಕ್ಯುಲರಿಸಂಗೆ ಇದು ಸ್ವಲ್ಪ ತದ್ವಿರುದ್ಧವಾಗಿದೆ ಎನ್ನತಕ್ಕದ್ದು ಸರ್ಕಾರದ ಅಭಿಪ್ರಾಯ. ಆ ದೃಷ್ಟಿ ಯಿಂದ ನಾನ್ ಸೆಕ್ಯುಲರ್ ಆಕ್ಟಿವಿಟೀಸ್ ದೇಶದಲ್ಲಿ ಬೆಳೆಯತಕ್ಕದ್ದು ರಾಷ್ಟ್ರೀಯ ಭಾವನೆಯ ನೀತಿಗೆ ವಿರುದ್ಧವಾದುದರಿಂದ ಅದನ್ನು ನಿಷೇಧಮಾಡಿದೆ.

Sri KAGODU THIMMAPPA.—May I know whether the Government has considered R. S. S. as a political party ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪೊಲಿಟಿಕಲ್ ಪಾರ್ಟಿ ಎಂದರೆ ಏನು ಎನ್ನತಕ್ಕದ್ದು ಎಲ್ಲಿಯೂ ಡಿಫೈನು ಮಾಡಿಲ್ಲ. ಒಂದು ಪೊಲಿಟಿಕಲ್ ಪಾರ್ಟಿ ಧಾರ್ಮಿಕ ವಿಷಯಗಳಲ್ಲಿ ಚಟುವಟಿಕೆ ಇಟ್ಟುಕೊಳ್ಳಬಹುದು. ಧಾರ್ಮಿಕ ವಿಷಯ ದಲ್ಲಿ ಚಟುವಟಿಕೆ ಇಟ್ಟುಕೊಳ್ಳತಕ್ಕದ್ದು, ಪೊಲಿಟಿಕಲ್ ಪಾರ್ಟಿ ಆಗಿರಬಹುದು. ನೀವು ಪ್ರಶ್ನೆ ಕೇಳಿದ್ದಕ್ಕೆ ಉತ್ತರ ಕೊಟ್ಟಿದ್ದೇನೆ. ಇದು ನಾನ್ ಸೆಕ್ಯುಲರ್ ಆಕ್ಟಿವಿಟೀಸ್‌ಗೆ ವಿರೋಧವಾಗುತ್ತದೆ ಎಂದು ಹೇಳಿದ್ದೇನೆ. ಅಧಿಕಾರಿಗಳು ಪ್ರವೇಶ ಮಾಡಿದರೆ ಶಿಕ್ಷೆ ಮಾಡುತ್ತೀರಾ ಎಂದು ಕೇಳಿದ್ದಕ್ಕೆ ಅಗತ್ಯವಾಗಿ ಮಾಡುತ್ತೇವೆ ಎಂದು ಹೇಳಿದ್ದೇನೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ.—ಸ್ವಾಮಿ, ಜಾತ್ಯಾತೀತ ರಾಷ್ಟ್ರದಲ್ಲಿ ರಾಷ್ಟ್ರೀಯ ಮನೋಭಾವನೆಗೆ ವಿರೋಧವಾಗಿ ಮತೀಯ ನೀತಿಗಳನ್ನು ಬೋಧಿಸುತ್ತಾ ವರ್ಣಾಶ್ರಮ ತತ್ವದಲ್ಲಿ ಅಡಗಿರತಕ್ಕಂಥ ಆರ್. ಎಸ್. ಎಸ್. ಸಂಸ್ಥೆ ಗಳನ್ನು ಅನೇಕ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರದವರು ಮುಟ್ಟುಗೋಲು ಮಾಡಿ ದ್ದಾರೆ. ಈಗ ಇವು ಎಲ್ಲಾ ಸ್ಕೂಲ್ ಗ್ರೌಂಡ್‌ಗಳಲ್ಲೂ ತಮ್ಮ ಆಕ್ಟಿವಿಟೀಸನ್ನು ಸರ್ಕಾರ ನಡೆಸಿಕೊಂಡು ಬರುತ್ತಾ ಇರುವುದರಿಂದ ಇದನ್ನು ನಿಲ್ಲಿಸುವುದಕ್ಕೆ ಏನಾದರೂ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ—ತಾವು ಕೇಳತಕ್ಕಂಥಾದ್ದು ಇದು ಸಾಮಾನ್ಯ ವಾದ ಪ್ರಶ್ನೆ. ಅನೇಕ ಜನ ಅವರವರ ಮತಪ್ರಚಾರಗಳನ್ನು ಮಾಡತಕ್ಕಂಥ ಪ್ರವೃತ್ತಿ ಉಳ್ಳವರಾಗಿದ್ದಾರೆ. ಮುಸ್ಲಿಂ ಲೀಗ್ ಆಗಲಿ, ಆರ್. ಎಸ್. ಎಸ್. ಸಂಸ್ಥೆ ಆಗಲಿ ಈಗ ಭಾರತದಲ್ಲಿ ಇರತಕ್ಕಂಥ ಈ ಸಂಸ್ಥೆಗಳ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕಾದರೂ ಅದು ಕೇಂದ್ರ ಸರ್ಕಾರದ ಪರ್ಯಾಲೋಚನೆಗೆ ಒಳ ಪಟ್ಟದ್ದಾಗಿದೆ.